ರಾಜ್ಯ ಗುಪ್ತವಾರ್ತೆ ಮಂಗಳೂರು ಘಟಕಕ್ಕೆ ನಿಯೋಜಿಸಿರುವ ಕುರಿತು ಅಗತ್ಯ ಕ್ರಮಕ್ಕೈಗೊಳ್ಳಲಾಗುತ್ತಿದೆ.

(ಇ) ರಾಜ್ಯ ಗುಪ್ತವಾರ್ತೆ ಘಟಕಕ್ಕೆ 2011–12 ರ ಸಾಲಿನ ಆಯವ್ಯಯದಲ್ಲಿ 7.5 ಕೋಟಿಗಳಷ್ಟು ಅನುದಾನವನ್ನು ಸರ್ಕಾರ ನಿಗದಿಪಡಿಸಿರುತ್ತದೆ. ರಾಜ್ಯಗುಪ್ತವಾರ್ತೆಗೆ ಗಣಕಯಂತ್ರ, ಲ್ಯಾಪ್‌ಟಾಪ್, ಪ್ರಿಂಟರ್‌ಗಳು ಯು.ಪಿ.ಎಸ್. ವಿಡೀಯೋ ಕ್ಯಾಮರಾ, ಫ್ಯಾಕ್ಸ್ ಮೆಷಿನ್ ಫೋಟೋ ಕಾಫೀಯರ್ ಇತ್ಯಾದಿಗಳನ್ನು ಒದಗಿಸುವ ಬಗ್ಗೆ ಪರಿಶೀಲಿಸುತ್ತಿದೆ

ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದ ಪ್ರೇಕ್ಷಣೀಯ ಸ್ಥಳಗಳ (ಸ್ಥಳೀಯ) ಪ್ರವಾಸೋದ್ಯಮ

519 (97) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) ಮುಖ್ಯಮಂತ್ರಿಯವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಆಗುಂಬೆ, ಹುಲಿಕಲ್, ನಗರದ ಕೋಟೆ, ಕವಲೇದುರ್ಗದ ಕೋಟೆ, ಕುಂದಾದ್ರಿ, ಕೊಡಚಾದ್ರಿ, ಗಾಜನೂರು ಡ್ಯಾಂ, ಮಂದಗದ್ದೆ ಪಕ್ಷಿಧಾಮ ಮುಂತಾದ ಪ್ರವಾಸಿಗರನ್ನು ಆಕರ್ಷಿಸುವ ಪ್ರೇಕ್ಷಣೀಯ ಸ್ಥಳಗಳಿರುವುದು ಸರಕಾರದ ಗಮನದಲ್ಲಿದೆಯೇ;

(ಆ) ರಾಜ್ಯ ಸರಕಾರ ಈ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸೋದ್ಯಮ ಇಲಾಖೆಯಿಂದ 2008–09, 2009–10, 2010–11 ಹಾಗೂ 2011–12ನೇ ಸಾಲುಗಳಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ತೊಡಗಿಸಿದ ಹಣವೆಷ್ಟು;

(ಇ) ಈ ಎಲ್ಲಾ ಪ್ರೇಕ್ಷಣೀಯ ಮತ್ತು ರಮಣೀಯ ಸ್ಥಳಗಳಿಗೆ ಹೋಗುವ ರಸ್ತೆಗಳನ್ನು ಉತ್ತಮಪಡಿಸಲು (ರಸ್ತೆಗೆ) ಎಷ್ಟು ಹಣ ತೊಡಗಿಸಲಾಗಿದೆ?

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಮುಖ್ಯಮಂತ್ರಿಗಳು

(ಅ) ಹೌದು.

(ಆ) ಅನುದಾನ ನೀಡಿದ ವಿವರಗಳು ಕೆಳಗಿನಂತಿರುತ್ತವೆ.

2008–09} ಅನುದಾನ ನೀಡಿರುವುದಿಲ್ಲ

2009–10}

2010–11 – 60.00 ಲಕ್ಷಗಳು

2011–12 – 50.00 ಲಕ್ಷಗಳು

ಇ) ಸಂಪೆಕಟ್ಟೆಯಿಂದ ಕೊಡಚಾದ್ರಿ ಬೆಟ್ಟದವರೆಗಿನ ರಸ್ತೆಯನ್ನು ಕೆ.ಆರ್.ಡಿ.ಸಿ.ಎಲ್. ಮೂಲಕ ಅಭಿವೃದ್ಧಿಪಡಿಸಲು ರೂ. 1468.83 ಲಕ್ಷಗಳನ್ನು ಸದರಿ ಸಂಸ್ಥೆಯಲ್ಲಿ ಠೇವಣಿ ಇಡಲಾಗಿದೆ.

ಕ್ರೀಡಾಂಗಣ ಕಾಮಗಾರಿ ವಿಳಂಬ

520 (98) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) ಮಾನ್ಯ ಮುಖ್ಯಮಂತ್ರಿಯವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ತೀರ್ಥಹಳ್ಳಿ ಪಟ್ಟಣದಲ್ಲಿ ಕಳೆದ ಅನೇಕ ವರ್ಷಗಳಿಂದ ಕ್ರೀಡಾಂಗಣ ಕಾಮಗಾರಿ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ, ಈ ಕ್ರೀಡಾಂಗಣ ಪೂರ್ಣಗೊಳ್ಳದಿರಲು ಹಣದ ಕೊರತೆಯೇ? ಅಥವಾ ಇಲಾಖಾ ಅಧಿಕಾರಿಗಳ ನಿರ್ಲಕ್ಷ್ಯವೇ?

(ಇ) ಈ ಕ್ರೀಡಾಂಗಣ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಮುಖ್ಯಮಂತ್ರಿಗಳು

(ಅ) ಇಲ್ಲ

(ಆ) ಈಗಾಗಲೇ ತೀರ್ಥಹಳ್ಳಿ ಪಟ್ಟಣದಲ್ಲಿ ಕ್ರೀಡಾಂಗಣ ಕಾಮಗಾರಿಯು ಪೂರ್ಣಗೊಂಡಿರುತ್ತದೆ.

(ಇ) ಈಗಾಗಲೇ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕುಡಿಯುವ ನೀರಿನ ತೊಂದರೆ

521 (696) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) ನಗರಾಭಿವೃದ್ಧಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–